

## ತೆಂಗಿನ ಹೆಡೆಯ ಸಿಂಗಾರ

ಕಲಾವಿದರ ಕೈಗೆ ಕಸ ಸಿಕ್ಕರೂ ಅದರಿಂದ ರಸ ಹಿಂಡಬಲ್ಲರು. ಕಲಾವಿದರ ಈ ಚಾಕಚಕ್ಯತೆಗೆ ಉದಾಹರಣೆಯಂತಿದೆ ಚಿತ್ರದಲ್ಲಿ ಕಾಣುತ್ತಿರುವ ಈ ದ್ವಾರ. ಪೊಳಲಿಯ ಬ್ರಹ್ಮಕಲಶೋತ್ಸವ ಸಂದರ್ಭ ನೋಡಿದ ಈ ವೈವಿಧ್ಯಮಯ ದ್ವಾರ, ಮಂಟಪ ಇತ್ಯಾದಿ ಸಿಂಗಾರಗಳು ಆಕರ್ಷಕವಾಗಿದ್ದವು. ಈ ದ್ವಾರ ನಿರ್ಮಾಣಕ್ಕೆ ದುಬಾರಿ ಬೆಲೆಯ ಪರಿಕರಗಳನ್ನು ಬಳಸಿಲ್ಲ. ಕೇವಲ ತೆಂಗಿನಮರದಿಂದ ಉದುರಿದ ಒಣ ಗರಿಗಳ ಹೆಡೆಯನ್ನಷ್ಟೇ ಕತ್ತರಿಸಿ ಕಲಾಕೃತಿಯಾಗಿ ಜೋಡಿಸಿ ಬಣ್ಣಗಳನ್ನು ಬಳಿಯುವ ಮೂಲಕ ಸೌಂದರ್ಯ ಕಳೆಗಟ್ಟುವಂತೆ ಮಾಡಿರುವುದು ಕಲಾವಿದನ ಕೌಶಲ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

## ಮಾದರಿಯಾದ ಮಾರ್ಗಸೂಚಿ

ಮಲೆನಾಡಿನ ಭೌಗೋಳಿಕ ಪ್ರದೇಶದ ಇಳಿಜಾರಿನ ಬೆಟ್ಟಗುಡ್ಡಗಳ ನಡುವಿನ ರಸ್ತೆಯಲ್ಲಿ ನೀವು ಎಲ್ಲಿಯೇ ಕಾಲಿಟ್ಟರೂ ದಾರಿ ತಪ್ಪುವುದು ಖಚಿತ. ಹಳ್ಳಿಗಳಲ್ಲಿ ಮೊದಲೆಲ್ಲಾ ಮನೆಯಿಂದ ಮನೆಯ ಸಂಪರ್ಕಕ್ಕೆ ಕಾಲು ಸಂಕ, ಕಾಲುದಾರಿಗಳೇ ಗತಿಯಾಗಿರುತ್ತಿತ್ತು. ಆದರೆ ಇತ್ತೀಚೆಗೆ ಮನೆ ಮನೆಯ ಸಂಪರ್ಕಕ್ಕೆ ವಾಹನ ಓಡಾಟಕ್ಕೆ ರಸ್ತೆಗಳು ನಿರ್ಮಾಣವಾಗಿವೆ. ಹಾಗೆಯೇ ಹಿಂದೆ ಬಳಸುವ ಕಾಲುದಾರಿಗಳು ಕಣ್ಮರೆಯಾಗಿವೆ. ಎಲ್ಲಿಯೇ ಅಪರಿಚಿತ ಸ್ಥಳಕ್ಕೆ ಹೋದರೂ ಬಹುತೇಕ ಕಡೆಗಳಲ್ಲಿ ಮಾರ್ಗಸೂಚಿ ಫಲಕಗಳ ಕೊರತೆ ಎದ್ದು ಕಾಣುತ್ತದೆ. ಕೆಲವು ನಾಮಫಲಕಗಳು ಮಳೆ ಬಿಸಿಲಿಗೆ ಶಿಥಿಲವಾಗಿ ಹೋಗುವ ಸಾಧ್ಯತೆಯೂ ಇರುತ್ತದೆ.

ಆದರೆ ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ಆನಗೋಡ ಸಮೀಪದ ಸಾವಗದ್ದೆ ಎನ್ನುವ ಹಳ್ಳಿಯಲ್ಲಿ ಸ್ಥಳೀಯ ಯುವಕರೆಲ್ಲಾ ಸೇರಿ ಶ್ರಮದಾನದ ಮೂಲಕ ಆಳೆತ್ತರದ ಬೃಹದಾಕಾರದ ಕಲ್ಲಿನ ಬಂಡೆಯನ್ನೇ ರಸ್ತೆಯಂಚಿಗೆ ತಂದು ನಿಲ್ಲಿಸಿ ಮಾರ್ಗಸೂಚಿ ಫಲಕವಾಗಿರಿಸಿದ್ದಾರೆ. ಅದಕ್ಕೆ ಬಣ್ಣ ಬಳಿದು ತಮ್ಮೂರು ಕೇರಿಯ ಕಾರೆಮನೆ, ಸಾವಗದ್ದೆ, ಬರಗದ್ದೆಯ ಹೆಸರನ್ನು ಮತ್ತು ಆ ದಾರಿಗೆ ದಿಕ್ಕು ತೋರುವ ಮಾರ್ಗಸೂಚಿಯನ್ನು ಸ್ವತಃ ತಾವೇ ಬರೆದಿದ್ದಾರೆ, ಅಪರಿಚಿತರಿಗೆ ಅಪರೂಪವಾಗಿ ಮಾದರಿಯಾಗುವ ಏಕಶಿಲೆಯ ಈ ಸಾಕ್ಷಿಗಲ್ಲು ಶಾಶ್ವತವಾಗಿ ಊರಿಗೆ ಸ್ವಾಗತ ಕೋರಲು ನೆಲೆ ನಿಂತಿದೆ.

–ದತ್ತಾತ್ರೇಯ ಭಟ್ಟ, ಕಣ್ಣಿಪಾಲ






## ಮುಗ್ಧರನ್ನು ವಂಚಿಸುವ ಮಾಟಗಾರರು

ಹಳ್ಳಿಯ ರಸ್ತೆಯೊಂದರಲ್ಲಿ ಹೋಗುತ್ತಿದ್ದಾಗ, ಮೂರು ರಸ್ತೆಗಳು ಕೂಡುವ ಜಾಗದಲ್ಲಿ ಮಂತ್ರಿಸಿದ ಲಿಂಬೆಹಣ್ಣು ಇಡುವುದು, ರಸ್ತೆಗಳು ಕೂಡುವ ಜಾಗದಲ್ಲಿ ರಾತ್ರಿ ವೇಳೆಯಲ್ಲಿ ತುಪ್ಪದ ದೀಪ ಹಚ್ಚಿಡುವುದು ಇಂಥದ್ದನ್ನೆಲ್ಲ ಆಗಾಗ್ಗೆ ಕಾಣುತ್ತಿರುತ್ತೇವೆ. ಮೂರು ರಸ್ತೆಗಳು ಕೂಡುವ ಜಾಗದ ಅಂಚಿನಲ್ಲಿ ಒಂದು ಬುಟ್ಟಿಯೊಳಗೆ ಮೂರು ಮರದ ಗೊಂಬೆಗಳನ್ನು ಇಟ್ಟು, ಅವುಗಳಿಗೆ ಅರಿಶಿಣ, ಕುಂಕುಮ ಹಚ್ಚಿ ಪೂಜಿಸಿ ಅಲ್ಲಿಯೇ ಬಿಟ್ಟು ಹೋಗಿದ್ದನ್ನು ಕಂಡಾಗ ಜನರ ಸಮಸ್ಯೆಗಳಿಗೆ ಮಂತ್ರ ತಂತ್ರಗಳಿಂದ ಪರಿಹಾರ ಹೇಳುವವರು ಇನ್ನೂ ಸಕ್ರಿಯರಾಗಿದ್ದಾರೆ ಎಂಬುದು ತಿಳಿಯುತ್ತದೆ. ಕಾಲ ಬದಲಾದರೂ, ಸಾಕ್ಷರತೆ ಹೆಚ್ಚಿದರೂ ಸಮಾಜದಲ್ಲಿ ಇಂತಹ ಮೂಢನಂಬಿಕೆಗಳು, ಡಂಭಾಚಾರಗಳು, ಮುಗ್ಧರನ್ನು ಹಣಕ್ಕಾಗಿ ವಂಚಿಸುವ ಇಂತಹ ಕತ್ತಲ ಕಾರ್ಯಗಳು ನಡೆಯುತ್ತಲೇ ಇವೆ ಎಂಬುದು ಸತ್ಯ.

ನಮ್ಮ ದೇಶದಲ್ಲಿ ಮಾಂತ್ರಿಕ ಆಚರಣೆಗಳು ಈಗಿನವಲ್ಲ. ಜನರ ನಂಬಿಕೆಯನ್ನೇ ಬಂಡವಾಳವಾಗಿ ಮಾಡಿಕೊಂಡು, ಮುಗ್ಧರನ್ನು ವಂಚಿಸುವುದು, ಜನರ ಅಜ್ಞಾನವನ್ನೇ ಹಣ ಕೀಳಲು ತಂತ್ರ ಮಾಡಿಕೊಳ್ಳುವ ಮಂತ್ರಗಾರರು ಹಿಂದಿನ ಕಾಲದಿಂದಲೂ ಇದ್ದಾರೆ. ಇಂತಹ ಮಾಂತ್ರಿಕರ ಕೈಗೆ ಸಿಕ್ಕು ಹಣ ಕಳೆದುಕೊಂಡವರು ನಮ್ಮ ಸುತ್ತಮುತ್ತಲೇ ಇದ್ದಾರೆ. ಅವರ ಮಾತನ್ನು ನಂಬಿ ಹೊರಟವರು ಪ್ರತಿ ಊರಲ್ಲೂ ಇರುತ್ತಾರೆ. ಇಂತಹ ವಂಚಕರಿಗೆ ಜನರೇ ಬುದ್ಧಿ ಕಲಿಸಬೇಕೇ ವಿನಃ ಯಾವುದೇ ಕಾನೂನುಗಳಲ್ಲ.

–ಜಿ.ಎಂ. ಬೊಮ್ನಳ್ಳಿ, ಉತ್ತರಕನ್ನಡ